# ಮಾಧ್ಯಾಹ್ನಿಕ ವಿಚಾರಃ

ಶೋ. ಪ ರಾಮಾನುಜನ್, ಪುಣೆ

'ವಿಪ್ರ ನುಡಿ' ಮಾಸಿಕ ಪತ್ರಿಕೆಯಲ್ಲಿ ಶ್ರೀ ಆರ್. ಗಣೇಶ್ ಎಂಬ ಮಹನೀಯರ 'ಸಂಸ್ಕಾರ ವಿಮರ್ಶೆ' ಎಂಬ ಲೇಖನದಲ್ಲಿ ಸಂಧ್ಯಾವಂದನೆಯು ದ್ವೈಕಾಲಿಕ ಕ್ರಿಯೆಯೆಂದು ಪ್ರತಿಪಾದಿಸಲಾಗಿದೆ ಮತ್ತು ಮಾಧ್ಯಾಹ್ನಿಕದ ಸಂಧ್ಯಾವಂದನೆತ್ವ ಅಲ್ಲಗಳೆಯಲಾಗಿದೆ ಎಂಬ ಭಾವನೆಯಿಂದ ಕೆಲ ತ್ರಿಕಾಲ-ಸಂಧ್ಯಾ-ಶ್ರದ್ಧಾಳುಗಳು ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನೂ, ವಿಶದೀಕರಣವನ್ನೂ ಅಪೇಕ್ಷಿಸಿದರಿಂದ ಈ ಲೇಖನ ಪ್ರಸ್ತುತವಾಗಿದೆ.

'ಸಂಸ್ಕಾರ ವಿಮರ್ಶೆ'ಕಾರರ ಗಮನಾರ್ಹ ಅಭಿಪ್ರಾಯಗಳೆಂದರೆ -

1. ಸಂಧ್ಯಾವಂದನೆಯು ಬೆಳಿಗ್ಗೆ, ಸಂಜೆ ಎರಡೇ ಹೊತ್ತು ಮಾಡಬೇಕಾದದ್ದು.

2. ಇದಕ್ಕೆ ತೈತ್ತಿರೀಯಾರಣ್ಯಕ ಹಾಗೂ ತದನುಸಾರಿ ಸೂತ್ರ-ಸ್ಮೃತಿಗಳೇ ಆಧಾರ.

3. ಮಾಧ್ಯಾಹ್ನಿಕವು ಸಾಯಂ ಪ್ರಾತಃ ಸಂಧ್ಯೆಗಳಿಗಿಂತ ವಿಲಕ್ಷಣವಾಗಿದೆ. ಇದು ನಿಬಂಧನ-ಪ್ರಯೋಗಕಾರರಿಂದಲೂ, ಶಿಷ್ಟಾಚಾರದಿಂದ, ಏರ್ಪಟ್ಟಿದೆಯೇ ಹೊರತು ಸೂತ್ರ ಸ್ಮೃತಿಗಳಿಂದಲ್ಲ. ವೇದಮೂಲವಂತೂ ಅಲ್ಲವೇ ಅಲ್ಲ.

4. ಇದು ಮೇಲ್ಕಂಡಂತೆ ತೃತೀಯ, ಚತುರ್ಥ ಪ್ರಮಾಣಾಭಾಸಮೂಲ, ಅರ್ವಾಚೀನ. ಇದನ್ನು ಅನ್ಯಥಯಿಸಬಹುದು, ಬೇಕು. ಈ ಮತವನ್ನು ಪುಷ್ಟೀಕರಿಸುವ ಬಹುಶ್ರುತರು ಅನೇಕರಿದ್ದಾರೆ, ಇತ್ಯಾದಿ.

ಪ್ರಸ್ತುತ ಲೇಖನದ ಉದ್ದೇಶ ಈ ಅಂಶಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುವುದು ಮತ್ತು ಹಲವು ಪ್ರಮಾಣಗಳನ್ನು ಮಾನ್ಯ ಲೇಖಕರ ಗಮನಕ್ಕೆ ತರುವುದೂ ಆಗಿದೆ.

ಸಂಧ್ಯೆ ಎಷ್ಟು, ಸಂಧ್ಯಾವಂದನೆ ಎಷ್ಟು ಸಲ ಎಂಬ ಪ್ರಶ್ನೆ ತೈತ್ತಿರೀಯಾರಣ್ಯಕ ವಾಕ್ಯಗಳಿಂದ ಮಾತ್ರ ನಿರ್ಣಯಿಸಲು ಅಶಕ್ಯ. 'ಪೂರ್ವಾಭಿಮುಖಾಃ ಸಂಧ್ಯಾಯಾಂ ಗಾಯತ್ರಿಯಾ ಅಭಿಮಂತ್ರಿತಾ ಆಪ ಊರ್ಧ್ವಂ ವಿಕ್ಷಿಪಂತಿ .... ಉದ್ಯಂತಮಸ್ತಂಯನ್ತಂ ಆದಿತ್ಯಂ ಅಭಿಧ್ಯಾಯನ್ ಕುರ್ವನ್' ಎಂಬಲ್ಲಿ ಶ್ರುತಿಮಾತ್ರ ಪ್ರಮಾಣವಾದರೆ ಉದಯ, ಅಸ್ತಮಯಗಳಲ್ಲಿ ಪೂರ್ವಾಭಿಮುಖವಾಗಿಯೇ ಅರ್ಘ್ಯಪ್ರದಾನ ಮಾಡ ಬೇಕಾಗುವುದು. ಉಪಲಕ್ಷಣ ಶಾಸ್ತ್ರಾರ್ಥವನ್ನು ಒಪ್ಪಿದರೆ ಮಾಧ್ಯಾಹ್ನಿಕವೂ ಅವರ್ಜನೀಯವಾಗುತ್ತದೆ.

ಇಲ್ಲಿ ಸೂತ್ರ, ಸ್ಮೃತಿಕಾರರನ್ನು ಒಪ್ಪಿರುವುದರಿಂದ ಈ ರೀತಿಯ ಶ್ರಮವಿಲ್ಲ ಎಂದರೆ, ಈ ಸೂತ್ರ, ಸ್ಮೃತಿಕಾರರು ಮಾಧ್ಯಾಹ್ನಿಕವನ್ನು ನಿತ್ಯಕರ್ಮ ಎಂದೂ, ಸಂಧ್ಯೆಯೆಂದೂ ವ್ಯವಹರಿಸಿ, ವಿಧಿಸಿದರೆ ಅದನ್ನು ಮಾತ್ರ ಒಪ್ಪಲು ಸಂಕೋಚವೇಕೆ? ಈ ಅಂಶವನ್ನೀಗ ನೋಡೋಣ.

**ಆಶ್ವಲಾಯನ** ಸ್ಮೃತಿರತ್ನದಲ್ಲಿ (4.125, 126) 'ಗಾಯತ್ರೀ ಪ್ರಾತರುಕ್ತಾ ಸ್ಯಾತ್ ಗಾಯತಃ ತ್ರಾಣತೋ ಭವೇತ್ । ಸಾವಿತ್ರೀತಿ ಚ ಮಧ್ಯಾಹ್ನೇ ಸವಿತ್ರಾತ್ಮತಯಾ ತಥಾ ॥ ಸರಸ್ವತೀ ಸ್ಯಾತ್ ಸಾಯಾಹ್ನೇ ವೇದ ಮಾತೃತ್ವಕಾರಣಾತ್ । ವಚಸಾಮ್ ಆಧಿಪತ್ಯಾಚ್ಚ ವಾಕ್ಸ್ವರೂಪತಯಾಪಿ ಚ ॥' ಎಂದಿದೆ. ಇದು 'ಋಗ್ಭಿಃ ಪೂರ್ವಾಹ್ಣೇ ದಿವಿ ದೇವ ಈಯತೇ । ಯಜುರ್ವೇದೇ ತಿಷ್ಠತಿ ಮಧ್ಯೇ ಅಹ್ನಃ । ಸಾಮವೇದೇನಾಸ್ತಮಯೇ ಮಹೀಯತೇ । ವೇದೈರಶೂನ್ಯಃ ತ್ರಿಭಿರೇತಿ ಸೂರ್ಯಃ। ಎಂಬ ತೈತ್ತಿರೀಯ ಬ್ರಾಹ್ಮಣ (ತೈ.ಕಾ. 3.12.1) ದಂತೆ 'ಆದಿತ್ಯಂ ಅಭಿಧ್ಯಾಯನ್' ಎಂಬುದರ ವಿವರಣೆ.

ಸ್ಮೃತಿರತ್ನಾಕರದ ಸಂಧ್ಯೋಪಾಸನ ವಿಧಿಯಲ್ಲಿ **ಯೋಗ ಯಾಜ್ಞವಲ್ಕ್ಯರು** - 'ಪೂರ್ವಾ ಸಂಧ್ಯಾ ತು ಗಾಯತ್ರೀ ಸಾವಿತ್ರೀ ಮಧ್ಯಮಾ ಸ್ಮೃತಾ । ಯಾ ಭವೇತ್ ಪಶ್ಚಿಮಾ ಸಂಧ್ಯಾ ಸಾ ವಿಜ್ಞೇಯಾ ಸರಸ್ವತೀ ॥ ಪ್ರಾತಃ ಕಾಲೇ ತು ಗಾಯತ್ರೀ ಸಾಯಂ ಕಾಲೇ ಸರಸ್ವತೀ । ಮಧ್ಯಂದಿನೇ ತು ಸಾವಿತ್ರೀ ಉಪಾಸ್ಯಾ ನಾಮಭೇದತಃ ॥ ಗಾಯತ್ರೀ ತು ಭವೇದ್ರಕ್ತಾ ಸಾವಿತ್ರೀ ಶುಕ್ಲವಿಗ್ರಹಾ । ಸರಸ್ವತೀ ಕೃಷ್ಣರೂಪಾ ಉಪಾಸ್ಯಾ ವರ್ಣಭೇದತಃ ॥ ಗಾಯತ್ರೀ ಬ್ರಹ್ಮರೂಪಾ ತು ಸಾವಿತ್ರೀ ರುದ್ರರೂಪಿಣೀ । ಸರಸ್ವತೀ ವಿಷ್ಣುರೂಪಾ ಉಪಾಸ್ಯಾ ರೂಪಭೇದತಃ ॥ ಉದಯೇ ಬ್ರಹ್ಮರೂಪಂ ತು ಮಧ್ಯಾಹ್ನೇ ತು ಮಹೇಶ್ವರಮ್ । ಸಾಯಾಹ್ನೇ ವಿಷ್ಣುರೂಪಂ ತು ತ್ರಿರೂಪಂ ಚೈವಮುಚ್ಯತೇ ॥' ಎಂದೂ, **ವ್ಯಾಸರು** - 'ಗಾಯತ್ರೀ ನಾಮ

ಪೂರ್ವಾಹ್ಣೇ ಸಾವಿತ್ರೀ ಮಧ್ಯಮೇ ದಿನೇ । ಸರಸ್ವತೀ ಚ ಸಾಯಾಹ್ನೇ ಸೈವ ಸಂಧ್ಯಾತ್ರಯೇ ಸ್ಮೃತಾ ॥' ಎಂದೂ ಸ್ಮರಿಸಿರುವರು.

ಇವುಗಳನ್ನನುಸರಿಸಿಯೇ ಸಂಧ್ಯಾಕ್ರಮದಲ್ಲಿ ಮೂರು ಹೊತ್ತುಗಳಲ್ಲಿ ಧ್ಯಾನವು, 'ಪ್ರಾತಃ ಧ್ಯಾಯಾಮಿ ಗಾಯತ್ರೀಂ ರವಿಮಂಡಲಮಧ್ಯಗಾಮ್ । ಋಗ್ವೇದಮುಚ್ಚಾರಯಂತೀಂ ರಕ್ತವರ್ಣಾಂ ಕುಮಾರಿಕಾಮ್ ॥ ಅಕ್ಷಮಾಲಾಕರಾಂ ಬ್ರಹ್ಮದೈವತ್ಯಾಂ ಹಂಸವಾಹನಾಮ್ । ಮಧ್ಯಂದಿನೇ ತು ಸಾವಿತ್ರೀಂ ರವಿಮಂಡಲಮಧ್ಯಗಾಮ್ ॥ ಯಜುರ್ವೇದಂ ವ್ಯಾಹರಂತೀಂ ಶ್ವೇತಾಂ ಶೂಲಕರಾಂ ಶಿವಾಮ್ । ಯುವತಿಂ ರುದ್ರದೈವತ್ಯಾಂ ಧ್ಯಾಯಾಮಿ ವೃಷವಾಹನಾಮ್ ॥' ಮತ್ತು 'ಸಾಯಂ ಸರಸ್ವತೀಂ ಶ್ಯಾಮಾಂ ರವಿಮಂಡಲಮಧ್ಯಗಾಮ್ । ಸಾಮವೇದಂ ವ್ಯಾಹರನ್ತೀಂ ಚಕ್ರಾಯುಧಧರಾಂ ಶುಭಾಮ್। ಧ್ಯಾಯಾಮಿ ವಿಷ್ಣುದೈವತ್ಯಾಂ ವೃದ್ಧಾಂ ಗರುಡವಾಹನಾಮ್ ॥' ಎಂದು ಮಾಡಲಾಗುತ್ತಿದೆ.

**ಬೋಧಾಯನ** ಧರ್ಮಸೂತ್ರ (2.4) ದಲ್ಲಿ 24 ಸೂತ್ರಗಳಿಂದ ಸಂಧ್ಯೋಪಾಸನ ವಿಧಿಯು ವಿವೃತವಾಗಿದೆ. 'ಸಾವಿತ್ರೀಂ ಸಹಸ್ರಕೃತ್ವಃ ಆವರ್ತಯೇತ್' (ಸೂ. 8, 10) ಎಂದು ಜಪವೂ ವಿಹಿತ. ನಂತರ (2.5) ರಲ್ಲಿ (ಮಾಧ್ಯಾಹ್ನಿಕ) ಸ್ನಾನವನ್ನು ವಿಧಿಸಿದೆ. ಆಮೇಲೆ, 'ಆಪಃ ಪುನಂತು' ಮಂತ್ರದಿಂದ ಆಚಮನ (**ಭಟ್ಟಭಾಸ್ಕರ**ರು ಈ ಮಂತ್ರಕ್ಕೆ 'ಸ್ನಾನೇ ಮಂತ್ರಾಚಮನೇ ವಿನಿಯೋಗಃ' ಎಂದು ವ್ಯಾಖ್ಯಾನ ಮಾಡಿದ್ದಾರೆ). ಸ್ನಾನ, ವಸ್ತ್ರಧಾರಣ ಮತ್ತು ಸಾವಿರ ಸಲ ಸಾವಿತ್ರೀಜಪ (ಸೂ.12) ವಿಧಿಸಿದ್ದಾರೆ. ಈ ಮಂತ್ರಕ್ಕೆ **ಗೋವಿಂದಸ್ವಾಮಿ** ಭಾಷ್ಯ - 'ಉತ್ತೀರ್ಯೇತಿ ಗ್ರಹಣಮ್ (ಆಚಮನಮ್) ಮಧ್ಯಾಹ್ನ-ಸಂಧ್ಯಾಗ್ರಾಹಕಮ್ । ಆಚಮನಾನಂತರಂ ಚ ಸಾವಿತ್ರ್ಯಾಭಿಮಂತ್ರಿತಾನಾಮಪಾಂ ಆದಿತ್ಯಾಭಿಮುಖಂ ಪ್ರಕ್ಷೇಪಣಂ ಸದಾಚಾರಸಿದ್ಧಂ ದ್ರಷ್ಟವ್ಯಮ್ ।' ಎಂದಿದೆ. ಮುಂದಿನ ಸೂತ್ರದಲ್ಲಿ ಸೂರ್ಯೋಪಸ್ಥಾನವನ್ನು ವಿಧಿಸಿ ನಂತರ ಈ ಸ್ನಾನಾದಿ ಕರ್ಮಗಳು ನಿತ್ಯ ಮತ್ತು ಪಂಚ ಬ್ರಹ್ಮ ಯಜ್ಞ ಎಂದಿದೆ. ಇದಾದ ಮೇಲೆ ಪಂಚಮಹಾಯಜ್ಞಗಳು ವಿವೃತವಾಗಿವೆ. 'ಸಂಸ್ಕಾರ ವಿಮರ್ಶ'ಕರಿಗೆ ಪಂಚಮಹಾಯಜ್ಞಗಳು ಉಪಾದೇಯವಾಗಿರುವುದರಿಂದ ಮಾಧ್ಯಾಹ್ನಿಕ ವಿಷಯದಲ್ಲಿ ಮಾತ್ರ ದ್ವೇಷವೇಕೋ?

ಈ ಮೇಲೆ ಹೇಳಿದ 'ಸದಾಚಾರ ಸಿದ್ಧಿ'ಯನ್ನು ವಿವರಿಸುತ್ತೇವೆ. ತೈತ್ತಿರೀಯ ಉಪನಿಷತ್ತಿನಲ್ಲಿ - 'ಅಥ ಯದಿ ತೇ ಕರ್ಮವಿಚಿಕಿತ್ಸಾ ವಾ ವೃತ್ತವಿಚಿಕಿತ್ಸಾ ವಾ ಸ್ಯಾತ್ .... ಏವಮು ಚೈತದುಪಾಸ್ಯಮ್' ಎಂಬ ವರೆಗೆ ಸದಾಚಾರವನ್ನು ಪ್ರಮಾಣವಾಗಿ ಹೇಳಿದೆ. ಇಲ್ಲಿಯ ಭಾಷ್ಯವೂ ಗಮನಾರ್ಹ. ಇದನ್ನನುಸರಿಸಿಯೇ **ಮನು** (2.8) - 'ವೇದೋಽಖಿಲೋ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಮ್ । ಆಚಾರಶ್ಚೈವ ಸಾಧೂನಾಂ' ಎಂದೂ **ಆಪಸ್ತಂಬರು** (ಧ.ಸೂ. 1.1.2.3) - 'ಧರ್ಮಜ್ಞಸಮಯಃ ಪ್ರಮಾಣಮ್ । ವೇದಾಶ್ಚ' ಮತ್ತು 'ಬ್ರಾಹ್ಮಣೋಕ್ತಾ ವಿಧಯಃ ತೇಷಾಮುತ್ಸನ್ನಾಃ ಪಾಠಾಃ ಪ್ರಯೋಗಾದನುಮೀಯಂತೇ' (1.2.10) ಎಂದೂ, **ಗೌತಮರು** (ಧ.ಸೂ. 1.1.2), 'ವೇದೋ ಧರ್ಮಮೂಲಂ ತದ್ವಿದಾಂ ಚ ಸ್ಮೃತಿಶೀಲೇ' ಎಂದೂ ಹೇಳಿದ್ದಾರೆ. 'ತ್ರಿಷವಣಂ ಉದಕೋಪಸ್ಪರ್ಶೀ' (ತೈ.ಆ 1.32), 'ಯತ್ಸಾಯಂ ಪ್ರಾತರ್ಮಧ್ಯಂ-ದಿನಂ ಚ ತಾನಿ ಸವನಾನಿ' (ತೈ.ಆ. 6.64) ಇತ್ಯಾದಿಗಳಲ್ಲೂ ತ್ರೈಕಾಲಿಕ ನಿತ್ಯಕರ್ಮ ವಿಹಿತ. ಇವು ಸಂಧ್ಯಾಮೂಲ ಆಗಿರಲು ಅಡ್ಡಿ ಏನೂ ಕಾಣುತ್ತಿಲ್ಲ.

ಸ್ಮೃತಿರತ್ನಾಕರದ, ಆಹ್ನಿಕ ಪ್ರಕರಣ ಸಂಧ್ಯೋಪಾಸನ ವಿಧಿಯಲ್ಲಿ **ಭಾರದ್ವಾಜರು** 'ಋಗ್ಯಜುಸ್ಸಾಮವೇದಾನಾಂ ರೂಪತ್ರಯಮಿದಂ ಪರಮ್ । ತಸ್ಮಾತ್ ದ್ವಿಜಃ ಸದಾ ಸಂಧ್ಯಾತ್ರಿತಯೋಪಾಸ್ತಿಂ ಆಚರೇತ್ ॥ ಪ್ರಾರಭ್ಯಾತಾರಕಾಜ್ಯೋತಿಃ ಆಭಾನೂದಯದರ್ಶನಾತ್ । ಪ್ರಾತಸ್ಸಂಧ್ಯೇತ್ಯಭಿಹಿತಾ ಸ್ವಾಧ್ಯಾಯಶ್ಚ ಮಹರ್ಷಿಭಿಃ ॥ ಸೂರ್ಯಸ್ಯ ಅಸ್ತಮಯಾತ್ ಪೂರ್ವಂ ಆರಭ್ಯಾತಾರಕೋದಯಾತ್ । ಸಾಯಂ ಸಂಧ್ಯೇತಿ ಸಾ ಮಧ್ಯಂ ಏತಯೋಃ ಮಧ್ಯಮಾ ಮತಾ ॥ ಎಂದೂ, ಅವರೇ ಸಂಧ್ಯಾ ಕರ್ಮ ವಿಧಿಯಲ್ಲಿ 'ಉತ್ಥಾಯ ಪೂರ್ವಂ ಸಂಧ್ಯಾಯಾಃ ಕೃತ್ವಾ ಚಾವಶ್ಯಕಾದಿಕಮ್ । ಸ್ನಾನಾಂತಂ ವಿಧಿವತ್ ಪೂರ್ವಂ ಸಂಧ್ಯಾಕರ್ಮ ಸಮಾಚರೇತ್ ॥ ಸೇವೇತ ಪೂರ್ವಂ ಪ್ರಾಕ್ಸಂಧ್ಯಾಂ ಮಧ್ಯಸಂಧ್ಯಾಂ ತತಃ ಪರಮ್ । ತತ್ಪಶ್ಚಾತ್ ಪಶ್ಚಿಮಾಂ ಸಂಧ್ಯಾಂ ಯಮೇನ ಸತತಂ ದ್ವಿಜಃ ॥' (ಯಮೇನ – ನಿಯಮೇನ) ಎಂದು ಹೇಳಿರುವರು.

ಇನ್ನು ಅಲ್ಲೇ ಮಾಧ್ಯಾಹ್ನಿಕ ಸ್ನಾನವಿಧಿಪ್ರಕರಣದಲ್ಲಿ, **ಭಾರದ್ವಾಜರು,** 'ಸ್ನಾನಂ ಉಕ್ತಂ ತ್ರಿಸಂಧ್ಯಾಸು ಯತೀನಾಂ ಬ್ರಹ್ಮಚಾರಿಣಾಮ್ । ಪ್ರಾತರ್ಮಧ್ಯಾಹ್ನಯೋಃ ಸ್ನಾನಂ ವಾನಪ್ರಸ್ಥಗೃಹಸ್ಥಯೋಃ ॥ ಪ್ರಾತಃ ಸತಾರಕಾಂ ಸಂಧ್ಯಾಂ ಸಾಯಂ ಸಂಧ್ಯಾಂ ಸಭಾಸ್ಕರಾಮ್ । ಸ್ನಾನಕರ್ಮಣಿ ತಾಂ ಮಧ್ಯಾಂ ಉಪಾಸೀತ ಯಥಾವಿಧಿ ॥', 'ಆಪಃ ಪುನಂತ್ವಿತ್ಯೇತಸ್ಯ ಮುನಿರಾಪೋಭಿಧಾನಕಃ । ಛಂದೋನುಷ್ಟುಬಿತಿ ಪ್ರೋಕ್ತಂ ದೇವತಾ ಬ್ರಹ್ಮಣಸ್ಪತಿಃ ॥ ವಿನಿಯೋಗಃ ಪಯಃಪಾನೇ ಇತ್ಯುಕ್ತ್ವಾಥ ಸಮಂತ್ರಕಮ್ । ಪೀತ್ವಾ ಜಲಮಥಾಚಾಮೇತ್ ಅನ್ಯತ್ ಪ್ರಾತರಿವಾಖಿಲಮ್ ॥' (ಅನ್ಯತ್ - ಮಾರ್ಜನಾದಿ ಜಪಾನ್ತಂ ಪ್ರಾತಃಕಾಲವತ್ ಕರ್ತವ್ಯಮಿತ್ಯರ್ಥಃ) ಎಂದೂ, **ಪ್ರಜಾಪತಿ** - 'ಸ್ನಾತ್ವೋತ್ಥಾಯ ಜಲಾತ್ ತೀರಂ ಏತ್ಯಾಸಿತ್ವಾ

ಸಮಾಹಿತಃ । ಆಚಮ್ಯ ಪೀತ್ವಾ ಮಂತ್ರಾಪಃ ಮಾರ್ಜಿತ್ವಾಭಿಮುಖೋ ರವೇಃ ॥ ಸಾವಿತ್ರ್ಯಾಂಜಲಿಂ ಉತ್ಕ್ಷಿಪ್ಯ ಸಮುಪಾಸ್ಯ ಹರಿಂ ಪುನಃ ।' (ಏವಂ ಸ್ನಾನಮಧ್ಯೇ ಸಂಧ್ಯೋಪಾಸನಮುಕ್ತಮ್) ಎಂದೂ, **ವಿಷ್ಣು** 'ಪ್ರಾತಸ್ಸಂಧ್ಯಾ ವಿಧಾನೇನ ಛಂದ ಆರ್ಷಂ ಚ ದೈವತಮ್ । ಸ್ಮೃತ್ವಾ ಚಾಯಮ್ಯ ಚ ಪ್ರಾಣಾನ್ ಆಚಾಮೇದ್ದರ್ಭಪಾಣಿನಾ ॥ ಆಪಃ ಪುನಂತು ಮಂತ್ರೇಣ ಆಪೋ ಹಿ ಷ್ಠೇತಿಮಂತ್ರತಃ । ಪ್ರಕ್ಷಿಪ್ಯ ಚಾಂಜಲಿಂ ಸಮ್ಯಕ್ ಉದು ತ್ಯಂ ಚಿತ್ರಮಿತ್ಯಪಿ ॥' ಎಂದೂ, **ಶಂಖ** - 'ಪ್ರಾತಃ ಸಂಧ್ಯಾಂ ಸನಕ್ಷತ್ರಾಂ ಮಧ್ಯಮಾಂ ಸ್ನಾನಕರ್ಮಣಿ । ಸಾದಿತ್ಯಾಂ ಪಶ್ಚಿಮಾಂ ಸಂಧ್ಯಾಂ ಉಪಾಸೀತ ಯಥಾವಿಧಿ ॥' ಎಂದೂ, **ಜಮದಗ್ನಿ** - 'ಮಧ್ಯಂದಿನೇಽಪ ಆಚಾಮೇತ್ ಮಂತ್ರೇಣಾಪಃ ಪುನಂತ್ವಿತಿ । ಅಗ್ನಿಶ್ಚ ಮೇತಿ ಸಾಯಂ ಚ ಪ್ರಾತಃ ಸೂರ್ಯಶ್ಚ ಮೇತಿ ಚ ॥' ಎಂದೂ, **ಮನುದಕ್ಷೌ** - 'ಆಪೋ ಹಿಷ್ಠಾದಿ ಮಂತ್ರೇಣ ಮೂರ್ಜಯಿತ್ವಾ ಯಥಾವಿಧಿ । ಆಪಃ ಪುನಂತು ಮಂತ್ರೇಣ ಜಲಂ ಪೀತ್ವಾ ಸಮಾಹಿತಃ ॥ ಸುರಭಿಮತ್ಯಾ ಸಹಾಬ್ಲಿಂಗೈಃ ಮಾರ್ಜಯಿತ್ವಾರ್ಘ್ಯಮುತ್ಸೃಜೇತ್ । ದ್ವೌ ಪಾದೌ ಸಂಪುಟೌ ಕೃತ್ವಾ ಪಾಣಿಭ್ಯಾಂ ಪೂರಯೇಜ್ಜಲಮ್ । ರವೇರಭಿಮುಖಸ್ತಿಷ್ಠನ್ ತ್ರಿರೂರ್ಧ್ವಂ ಸಂಧ್ಯಯೋಃ ಕ್ಷಿಪೇತ್ ॥' ಎಂದೂ, ಸ್ಮೃತ್ಯರ್ಥಸಾರದಲ್ಲಿ, 'ಅರ್ಘ್ಯಮೇಕಂ ಪ್ರದಾತವ್ಯಂ ಮಧ್ಯಾಹ್ನೇ ಭಾಸ್ಕರಂ ಪ್ರತಿ । ಉಭಯೋಃ ಸಂಧ್ಯಯೋಶ್ಚೈವ ಹ್ಯಪ ಊರ್ದ್ವಂ ತ್ರಿರುತ್ಕ್ಷಿಪೇತ್ ॥ .... ತತೋ ಮಧ್ಯಾಹ್ನಸಮಯೇ ಮಂತ್ರವತ್ ಸ್ನಾನಂ ಆಚರೇತ್ । ತತೋ ವಸ್ತ್ರದ್ವಯಂ ಶುದ್ಧಂ ಆಚ್ಛಾದ್ಯ ದ್ವಿರುಪಸ್ಪೃಶೇತ್ ॥ ಊರ್ಧ್ವಪುಂಡ್ರಂ ವಿಧಾನೇನ ಧೃತ್ವಾ ಸಂಧ್ಯಾಂ ತತಶ್ಚರೇತ್ ।' ಎಂದೂ, ವೈದ್ಯನಾಥೀಯದಲ್ಲಿ **ಶಂಖ**ವಚನ - 'ಅಥ ಮಧ್ಯಮಸಂಧ್ಯಾಯಾಂ ಆಸೀನಃ ಪ್ರಾಙ್ಮುಖೋ ಜಪೇತ್' ಇತ್ಯಾದಿ ಅನೇಕ ಪ್ರಯೋಗಗಳಿಂದ ಮಾಧ್ಯಾಹ್ನಿಕ ಸಂಧ್ಯೆ ಸಿದ್ಧಿಸುವುದು.

ಖಾದಿರಗೃಹ್ಯಸೂತ್ರದಲ್ಲಿ (4.1.22) 'ಯಶೋಽಹಮಿತ್ಯಾದಿತ್ಯಮುಪತಿಷ್ಠೇತ್ ಯಶಸ್ಕಾಮಃ ಪೂರ್ವಾಹ್ಣ ಮಧ್ಯಂ-ದಿನಾಪರಾಹ್ಣೇಷು' ಇತ್ಯಾದಿ ಇಲ್ಲಿ ಗಮನಿಸತಕ್ಕದ್ದು. ಶಾಸ್ತ್ರಗ್ರಂಥಗಳಲ್ಲಿ 'ತ್ರಿಸಂಧ್ಯಂ ಯಃ ಪಠೇಚ್ಛುಚಿಃ' ಇತ್ಯಾದಿ ಪ್ರಯೋಗದಿಂದಲೂ ಸಂಧ್ಯೆ ಮೂರು ಎಂದು ಸಿದ್ಧಿಸುವುದು. ಮತ್ತೊಂದು ತತ್ಕಾಲೋಚಿತವಾದ ಮಾತೆಂದರೆ ಮೂರು ಬಾರಿ ಸಂಧ್ಯೆ ಮಾಡುವ ಆಸ್ತಿಕರು ಬಹು ವಿರಳರಾಗಿರುವಾಗ ಅವರ ಹಿತದೃಷ್ಟ್ಯಾ(?) ಒಂದು ಸಂಧ್ಯೆಯನ್ನು ಉಳಿತಾಯಿಸಲು ಶ್ರಮಿಸುವುದಕ್ಕಿಂತ ಸಂಧ್ಯಾಹೀನರನ್ನು ಉಜ್ಜೀವಯಿಸಲು ಶ್ರಮಿಸುವುದು ಲೇಸು ಎಂದು ನನ್ನ ನಮ್ರ ಭಾವನೆ. (ಶ್ರೀಕೃಷ್ಣಪರಮಾತ್ಮನು – ನ ಬುದ್ಧಿಭೇದಂ ಜನಯೇತ್ ಅಜ್ಞಾನಾಂ ಕರ್ಮಸಂಗಿನಾಂ' ಎಂದು ಹೇಳಿದಂತೆಯಾದರೂ ಈ ವೈಜ್ಞಾನಿಕಪರ, ಆರ್ಷ ಸಂಪ್ರದಾಯ ಲೋಪಭೀರುಗಳ ಶ್ರದ್ಧಾಳುಗಳನ್ನು ಬಿಟ್ಟಿರ ಕೊಡದೇ?) ಉಪನಯನ ಪ್ರಕರಣದಲ್ಲಿ ಪ್ರಥಮತಃ ಮಾಧ್ಯಾಹ್ನಿಕವೇ ಎದುರಾಗುವಾಗ ಅದಕ್ಕೆ ತಿಲಾಂಜಲಿ ಕೊಟ್ಟು ಬಿಡೋಣ ಸೋಜಿಗ ಎನಿಸುತ್ತದೆ. ಆಚಮನ ಮಂತ್ರಕ್ರಮವೂ ಹೀಗೇ ಇರಬೇಕೆ (ಅ. 23,24,25).

ಏತಾವತಾ ನಾವು ಮಾಡಲು ಇಚ್ಛೆಯಿಲ್ಲದಿದ್ದರೂ ವಸ್ತುಸ್ಥಿತಿಯನ್ನು ಅಪಲಾಪ ಮಾಡದಿರುವುದು ಶ್ರೇಷ್ಠವೆಂದೆಂದು ಈ ಕಿರುಲೇಖನವನ್ನು ಮುಗಿಸುವೆವು.

ಶುಭಮಸ್ತು

# ಪ್ರದೋಷ ಸಂಘ

ರಜತ ಮಹೋತ್ಸವ ವರ್ಷ

ನಂ.103, 17ನೇ ಅಡ್ಡರಸ್ತೆ, 1ನೇ ಬ್ಲಾಕ್ (ನವರಂಗ್ ಚಿತ್ರಮಂದಿರದ ಬಳಿ)
ರಾಜಾಜಿನಗರ, ಬೆಂಗಳೂರು – ೫೬೦ ೦೧೦

---

ಕ್ರಮಾಂಕ 13 ದಿನಾಂಕ 17-3-೨೦೦೦

ಸಹೃದಯ ಸನ್ಮಾನ್ಯ ವಿದ್ವಾಂಸರಾದ ವೇ॥ಬ್ರ॥ಶ್ರೀ Dr. P. ರಾಮಾನುಜನ್.

ಅವರಲ್ಲಿ ಪ್ರಣಾಮಪೂರ್ವಕ ವಿನಮ್ರ ವಿಜ್ಞಾಪನೆಗಳು.

ನಮ್ಮ ಪ್ರದೋಷ ಸಂಘದ ವತಿಯಿಂದ ವೇದಾಧ್ಯಯನ, ಶಂಕರಭಾಷ್ಯಾಧ್ಯಯನ, ಪ್ರತಿವರ್ಷವೂ ಗಾಯತ್ರೀ ಪ್ರತಿಪತ್ತಿನಂದು ಶ್ರೀಗಾಯತ್ರೀಹೋಮ ಮತ್ತು ಪ್ರತಿ ಪ್ರದೋಷಕಾಲದಲ್ಲಿಯೂ ಶಿಷ್ಯರೊಂದಿಗೆ ಪ್ರದೋಷಪೂಜೆಯನ್ನು ನಡೆಸಿಕೊಂಡು ಬರುತ್ತಿದೆ.

ಮುಂದಿನ ವಿಕ್ರಮ ಸಂವತ್ಸರದಲ್ಲಿ ನಮ್ಮ ಸಂಘಕ್ಕೆ ಇಪ್ಪತ್ತೈದು ವರ್ಷಗಳು ತುಂಬುತ್ತವೆ. ಆಗ ರಜತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿ ಪ್ರತಿಷ್ಠಿತ ವಿದ್ವಾಂಸರ ಲೇಖನಗಳಿಂದ ಕೂಡಿರುವ ಒಂದು ಸಂಸ್ಮರಣ ಗ್ರಂಥವನ್ನು ಪ್ರಕಟಿಸಬೇಕೆಂದು ಸಂಘದ ಸದಸ್ಯರೆಲ್ಲರೂ ಸಂಕಲ್ಪಿಸಿದ್ದಾರೆ. ಈ ಸಂಸ್ಮರಣ ಗ್ರಂಥಕ್ಕಾಗಿ ತಾವು ಕೃಪೆಮಾಡಿ ಉಪನಿಷತ್ತುಗಳಲ್ಲಿ [illegible] ಪ್ರಾಶಸ್ತ್ಯ ಯಜ್ಞೋಪವೀತಸಂಸ್ಕಾರ ವಿಷಯದಲ್ಲಿ ನಾಲ್ಕು ಪುಟಗಳ ಒಂದು ಪ್ರಬಂಧವನ್ನು ಬರೆದು ದಿನಾಂಕ 25-4-2000 ರೊಳಗೆ ತಪ್ಪದೆ ಕಳುಹಿಸಿಕೊಟ್ಟು, ಈ ಧಾರ್ಮಿಕ ಕಾರ್ಯಕ್ಕೆ ಸಹಕರಿಸಿ, ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇನೆ. ರಜತಮಹೋತ್ಸವದ ಆಹ್ವಾನ ಪತ್ರಿಕೆಯನ್ನು ಮುಂದೆ ಕಳುಹಿಸಲಾಗುವುದು.

ಇತಿ ಪ್ರಣಾಮಪೂರ್ವಕ
ವಿಜ್ಞಾಪನೆಗಳೊಂದಿಗೆ
ತಮ್ಮ ವಿಶ್ವಾಸಿ
[signature]

ವಿಳಾಸ ಪ್ರದೋಷಸಂಘ.
ನಂ ೧೦೩. ಹದಿನೇಳನೇ ಅಡ್ಡರಸ್ತೆ.
ರಾಜಾಜಿನಗರ. ನವರಂಗ್ ಚಿತ್ರಮಂದಿರದ ಹತ್ತಿರ.
ಬೆಂಗಳೂರು. ೧೦ (ದೂರವಾಣಿ 3326135)